IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಶಿವಶರಣರ ವಚನಗಳಲ್ಲಿ ಮಾನವೀಯ ಪ್ರಜ್ಞೆ: ಒಂದು ಚಿಂತನೆ

**ಲೇಖಕರು:**
**ಡಾ. ಕೆ.ವಿ.ಜಯಪ್ಪ.**
ಸಹಾಯಕ ಪ್ರಾಧ್ಯಾಪಕರು
ಮಹಾಂತಸ್ವಾಮಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ,
**ಹಂಸಭಾವಿ. ಹಾವೇರಿ ಜಿಲ್ಲೆ**

## *ಪ್ರಸ್ತಾವನೆ :*

ಹನ್ನೆರಡನೆ ಶತಮಾನದ ಶಿವಶರಣರು ಮಾನವತಾವಾದಿಗಳು. ಮನುಷ್ಯ ಮತ್ತು ಮನುಷ್ಯನ ಜೀವನ ಅವರ ಚಿಂತನೆಯ ಕೇಂದ್ರ ಸ್ಥಾನವಾಗಿತ್ತು. ಮನುಷ್ಯರನ್ನು ಮನುಷ್ಯರನ್ನಾಗಿಸುವ ಅಥವಾ ಮಾನವನನ್ನಾಗಿಸುವ ಸತ್ಕಾರ್ಯರ್ಯದಲ್ಲಿ ಶರಣರು ತಮ್ಮನ್ನು ತಾವು ಆಳವಾಗಿ ತೊಡಗಿಸಿಕೊಂಡ ಸಂದರ್ಭದಲ್ಲಿ ಅವರಿಂದ ರಚಿತವಾದ ಸಾಹಿತ್ಯವೆ ವಚನ ಸಾಹಿತ್ಯ ಅಥವಾ ಶರಣ ಸಾಹಿತ್ಯ. ಮಾನವರು ತಮ್ಮನ್ನು ತಾವ'ರಿತು ತಮ್ಮನ್ನ ಉದ್ದಾರ ಮಾಡಿಕೊಳ್ಳಲು ಇದ್ದ ಅವಕಾಶಗಳನ್ನು ಸಮಾಜದಲ್ಲಿನ ಕೆಲವು ಪಟ್ಟಭದ್ರರು ಸಮಸ್ತ ಮಾನವ ಜನಾಂಗಕ್ಕೆ ಒದಗಿಸದೆ ಮಾನವ ಮಾನವರಲ್ಲಿ ಮೇಲು-ಕೀಳು, ಆ ಜಾತಿ, ಈ ಜಾತಿ, ಹೆಣ್ಣು-ಗಂಡು ಇತ್ಯಾದಿ ಹತ್ತು ಹಲವು ಭೇದಗಳನ್ನು ಕಲ್ಪಿಸಿ, ಮಾನವತೆಯ ಕಗ್ಗೊಲೆ ನಡೆಸಿದುದು ಒಂದು ವಿಪರ್ಯಾಸವೇ ಸರಿ, ಇಂತಹ ಹತ್ತು ಹಲವು ವಿಪರ್ಯಾಸಗಳ ವಿರುದ್ಧ ಸೆಟೆದು ನಿಂತು, ತೀವ್ರ ಪ್ರತಿರೋಧ ತೋರಿದ ಸನ್ನಿವೇಶದಲ್ಲಿ ಹುಟ್ಟಿಬಂದ ಜನಮುಖಿಯಾದ ಸಾಹಿತ್ಯ ವಚನ ಸಾಹಿತ್ಯ, ಈ ಸಾಹಿತ್ಯ ಎಂದೆಂದೂ ಪ್ರಸ್ತುತವಾಗಿದೆ.

ಅನಾದಿ ಕಾಲದಿಂದಲೂ ಸಂಪ್ರದಾಯವಾದಿ ಸ್ವಾರ್ಥಿಗಳಿಂದ ಸಾಮಾನ್ಯ ಜನತೆಯ ಶೋಷಣೆಯು ಅವ್ಯಾಹತವಾಗಿ ಮುಂದುವರಿದಿತ್ತು ಇಂತಹ ಒಂದು ಅಸಹಾಯಕ ಪರಿಸ್ಥಿತಿಯಲ್ಲಿ ಸಾಮಾನ್ಯ ಜನರ ಬದುಕು ನಿಸ್ತೇಜವಾಗಿ ಸಾಗಿತ್ತು. ಇಂತಹ ವಿಷಮ ವ್ಯೆವಸ್ಥೆಯಲ್ಲಿದ್ದ ಅವಕಾಶಗಳಿಂದ ವಂಚಿತರಾದ ದೀನ-ದಲಿತರನ್ನು, ಅಸಹಾಯಕ ಮಹಿಳೆಯರನ್ನು ಕಂಡು ಶರಣರು ಮಮ್ಮಲ ಮರುಗಿದರು ಅಷ್ಟೇ ಅಲ್ಲದೆ ಆ ನೊಂದವರ ಬಾಳನಲ್ಲಿ ವಚನ ಸಾಹಿತ್ಯದ ಮೂಲಕ ತಮ್ಮ ಅನುಭಾವಗಳಿಂದ ಬೆಳಕನ್ನು ಮೂಡಿಸಲು ಪ್ರಯತ್ನಿಸಿದರು. ಆ ವೇಳೆಗಾಗಲೇ ಜೇಡರ ದಾಸಿಮಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯರಂತಹ ಶರಣರಿಂದ ಒಂದು ಬಗೆಯ ವೈಚಾರಿಕ ಚಿಂತನೆ ಪ್ರತಿರೋಧ ಪ್ರಕ್ರಿಯೆ ನಡೆದಿರುವ ಬಗ್ಗೆ ಅವರ ವಚನಗಳಿಂದ ತಿಳಿದು ಬರುತ್ತದೆ. ಆದರೆ ಅದು ಅವರವರ ಮಟ್ಟದಲ್ಲಿತ್ತು. ಅವರಿಂದ ಮತ್ತು ಅವರ ಪ್ರಗತಿಪರ ಚಿಂತನೆಗಳಿಂದ ಶರಣರು ಪ್ರಭಾವಿತರಾಗಿರಲು ಸಾಧ್ಯಯಿದೆ. ಇದರೊಂದಿಗೆ ಶರಣರು ದೀನ-ದಲಿತರ, ಶೋಷಿತ ಮಹಿಳೆಯರ ಧ್ವನಿಯಾಗಿ ನಿಂತು ಅವರನ್ನು ಮುಖ್ಯವಾಹಿನಿಗೆ ತರಲು ಬಹುದೊಡ್ಡ ಶಕ್ತಿಯಾಗಿ ನಿಂತರು. ಆ ಸನ್ನಿವೇಶದಲ್ಲಿ ಶರಣರಿಗೆ ಎದುರಾಗಬಹುದಾದ ಅಡ್ಡಿ-ಆತಂಕ, ಪ್ರತಿರೋಧಗಳ ಬಗ್ಗೆಯೂ ಅವರಲ್ಲಿ ಒಂದು ಬಗೆಯ ಚಿಂತೆಯಿತ್ತಾದರು ಅವರ ಅಂತಃಕರಣದಲ್ಲಿದ್ದ ಮಾನವೀಯತೆಯ ಪ್ರಜ್ಞೆ ಅವರನ್ನು ಸುಮ್ಮನಿರಲು ಬಿಡಲಿಲ್ಲ. ಈ ಕಾರಣವಾಗಿಯೇ ಕೆಳಗಿನ ವಚನದಲ್ಲಿ ತಮ್ಮ ಸಮಾಜಮುಖಿ ಕಾರ್ಯಕ್ಕೆ ಅಡ್ಡಿಪಡಿಸುವವರಿಗೆ ತಕ್ಕ ಉತ್ತರವನ್ನು ಸಾತ್ವಿಕವಾಗಿಯೇ ಕೊಟ್ಟಿರುವುದನ್ನು ಗಮನಿಸಬಹುದು

**"ಆರು ಮುನಿದು ನಮ್ಮನೇನು ಮಾಡುವರು?**
**ಊರು ಮುನಿದು ನಮ್ಮನೆಂತುಮಾಡುವುದು?**
**ನಮ್ಮ ಕುನ್ನಿಗೆ ಕೂಸ ಕೊಡಬೇಡ**
**ನಮ್ಮ ಸೊಣಗಂಗೆ ತಳಗೆಯಲಿಕ್ಕಬೇಡ**
**ಆನೆಯ ಮೇಲೆ ಹೋಹನ ಶ್ವಾನಕಚ್ಚಬಲ್ಲುದೆ?**
**ನಮಗೆ ನಮ್ಮ ಕೂಡಲಸಂಗನುಳ್ಳನ್ನಕ್ಕ"**..೧

ಎಂದು ಹೇಳುವುದರ ಮೂಲಕ ಶರಣರು ಸಮಷ್ಟಿಯ ಉದ್ದಾರದ ಬಗ್ಗೆ, ಸಕಲ ಜೀವಾತ್ಮರ ಲೇಸಿನ ಬಗ್ಗೆ ಚಿಂತಿಸಿದರು. ಆ ನಿಟ್ಟಿನಲ್ಲಿ ಅಭೂತಪೂರ್ವ ಕಾರ್ಯ ಮಾಡಿ ಸಮುದಾಯಗಳ ಜಾಗೃತಿಗೆ ಕಾರಣರಾದರು.

## *ವಚನಗಳಲ್ಲಿ ಮಾನವೀಯ ಪ್ರಜ್ಞೆ:*

ಜೀವಪರ ನಿಲುವನ್ನು ತಳೆದ ಶರಣರು ಮಾನವೀಯತೆಯ ನವಸಮಾಜದ ನಿರ್ಮಾಣದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಈ ಹಿನ್ನೆಲೆಯಲ್ಲಿಯೇ ಸಾಹಿತ್ಯ, ಸಮಾಜ ರಚನೆ, ಅನುಭಾವ ಮಂಟಪ, ಕಾಯಕಧರ್ಮ, ವೈಚಾರಿಕತೆಪ್ರಜ್ಞೆ ಸ್ತ್ರೀಪರ ನಿಲುವು, ಪ್ರತಿಭಟನೆ ಇತ್ಯಾದಿಗಳಿಗೆ ಅವರ ಮಾನವೀಯತೆಯ ಪ್ರಜ್ಞೆಯೇ ಮೂಲ ಪ್ರೇರಣೆಯಾಗಿ ನಿಂತಿರುವುದನ್ನು ಅವರ ವಚನಗಳ ಅಧ್ಯಯನದಿಂದ ಗುರುತಿಸಬುದಾಗಿದೆ. ಹೀಗೆ ಮಾನವೀಯತೆಯಿಂದ ಪ್ರೇರಿತರಾದ ಅವರು ತಮ್ಮ ಕಾರ್ಯವನ್ನು ಕಾರ್ಯರೂಪಕ್ಕೆ ತಂದ ಬಗೆಯನ್ನು ವಿವಿಧ ವಚನಕಾರರ ವಚನಗಳಿಂದ ಪರಿಶೀಲಿಸಬಹುದಾಗಿದೆ.

ಪಟ್ಟಭದ್ರರ ತಂತ್ರ-ಕುತಂತ್ರಗಳನ್ನು ಮತ್ತು ಅವರ ಮಾತಿನಲ್ಲಿ ಯಾವುದೇ ಬಗೆಯ ಹುರುಳಿಲ್ಲದಿರುವುದನ್ನು ಅವರ ಮುಖದ ಮೇಲೆ ಹೊಡೆದಂತೆ ಹೇಳಿ, ಸಾಮಾನ್ಯ ಜನತೆ ಅವರ ಸ್ವಾರ್ಥಬೆರೆತ ಮಾತುಗಳನ್ನು ನಂಬದಂತೆ ಮಾಡುವ ಅಗತ್ಯ ಆಗ ಮತ್ತು ಈಗ ತುಂಬಾ ಇದೆ, ಈ ಕಾರ್ಯವನ್ನು ವಚನಕಾರರು ಅಂದೆ ತಮ್ಮ ವಚನಗಳ ಮೂಲಕ ಮಾಡಿದರು.

**“ಏನಯ್ಯಾ ವಿಪ್ರರು ನುಡಿದಂತೆ ನಡೆಯರು**
**ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ**
**ಇದೆಂತಯ್ಯ? ಕೂಡಲ ಸಂಗಮದೇವ**
**ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟಿ**
**ಗೋಮಾಂಸವ ತಿಂದರೆಂಬುದಕ್ಕೆ ಇದೇ ದೃಷ್ಟ”..೨**

**“ ಹೊಲೆಯೊಳಗೆ ಹುಟ್ಟಿ ಕುಲವನರಸುವರೆ?**
**ಎಲವೊ, ಮಾತಂಗಿಯ ಮಗ ನೀನು ಸತ್ತುದನೆಳೆವನೆತ್ತಣ ಹೊಲೆಯ?**
**ಹೊತ್ತು (ಹೋತ?) ತಂದು ನೀವು ಕೊಲುವಿರಿ**
**ಶಾಸ್ತ್ರವೆಂಬುದು ಹೋತಿಂಗೆ ಮಾರಿ**
**ವೇದವೆಂಬುದು ನಿಮಗೆ ತಿಳಿಯದು**
**ನಮ್ಮ ಕೂಡಲಸಂಗನ ಶರಣರು ಕರ್ಮವಿರಹಿತರು**
**ಅನುಪಮ ಚಾರಿತ್ರರು, ಅವರಿಗೆ ತೋರಲು ಪ್ರತಿಯಿಲ್ಲ”೩**

ಈ ತರಹದ ವಚನಗಳಲ್ಲಿ ವಚನಕಾರರ ಸಮಾಜೋದ್ಧಾರ ಮತ್ತು ಸಾಮಾನ್ಯ ಜನರನ್ನು ಎಚ್ಚರಿಸುವ ನೈತಿಕ ಮಾರ್ಗವನ್ನು ನಾವು ಕಾಣುತ್ತೇವೆ. ಇದರಿಂದ ವಚನಕಾರರ ಚಿಂತನಾ ವಿಸ್ತಾರತೆ ಮತ್ತು ಭವಿಷ್ಯತ್ತಿನ ಸಮಾಜದ ಬದಲಾವಣೆಗಾಗಿ ನಡೆಸಬೇಕಾದ ಸಮಾಜ ಸುಧಾರಣಾ ಕ್ರಾಂತಿಗಾಗಿ ಅವರು ಮಾಡಿಕೊಂಡಿದ್ದ ಸಿದ್ಧತೆ ಎಂತಹದೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಶೋಷಣೆ ಮತ್ತು ಶ್ರೇಷ್ಠ–ಕನಿಷ್ಠ ಎನ್ನುವ ಸಂಪ್ರದಾಯವಾದಿಗಳ ವಿರುದ್ಧ ಶರಣರ ಸಾತ್ವಿಕ ಸಿಟ್ಟು ಸಹಜವಾಗಿಯೇ ಪ್ರಕಟವಾಗಿರುವುದನ್ನು ಮನಗಾಣಬಹುದು.
ಶತಶತಮಾನಗಳಿಂದ ಅಂಧಃಕಾರದ ಗವಿಯಲ್ಲಿ ತೊಳಲಾಡುತ್ತಿರುವ ದಲಿತರನ್ನು ಎತ್ತಿಹಿಡಿವ ಶರಣರ ಚಿಂತನೆಗಳ ಮೇಲೆ ಮಾನವೀಯ ಪ್ರಜ್ಞೆ ಹೆಚ್ಚು ಪ್ರಭಾವ ಬೀರಿರುವುದನ್ನು ವಚನಗಳಿಂದ ಗ್ರಹಿಸಬಹುದು

**“ಅಪ್ಪನು ನಮ್ಮ ಮಾದಾರ ಚೆನ್ನಯ್ಯ ..**
**ಬೊಪ್ಪನು ನಮ್ಮ ಡೋಹರ ಕಕ್ಕಯ್ಯ**
**ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ**
**ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ**
**ಎನ್ನನೇತಕ್ಕೆ ಅರಿಯಿರಿ, ಕೂಡಲಸಂಗಮದೇವಾ?**

ಈ ವಚನದಲ್ಲಿ ಬಸವಣ್ಣನವರು ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯರನ್ನು ಅಪ್ಪ ಬೊಪ್ಪ ಎಂದು ಅಪ್ಪಿಕೊಂಡಿದ್ದಾರೆ. ವಚನಕಾರರದು ಬರೀ ಘೋಷಣೆಯಲ್ಲ. ಅನೇಕ ಸಲ ಘೋಷಣೆ, ಶೋಷಣೆಗೆ ದಾರಿ ಮಾಡಿಕೊಡುತ್ತದೆ. ನುಡಿ–ನಡೆ ಒಂದಾಗಿದ್ದ ವಚನಕಾರರು ಘೋಷಣೆ ಮಾಡಲಿಲ್ಲ. ಅದರಂತೆ ಅನುಭವ ಮಂಟಪ ಸಂಸ್ಥಾಪಿಸಿ ಸಾಮಾಜಿಕ, ಧಾರ್ಮಿಕ, ನೈತಿಕ ಸರ್ವವಿಧದಿಂದಲೂ ಪ್ರಗತಿಪರ ನವಸಮಾಜ ನಿರ್ಮಾಣ ಮಾಡಿ ತೋರಿಸಿದ್ದರಿಂದ ವಚನಕಾರರ ಪ್ರಗತಿಪರ ಧೋರಣೆ ಎದ್ದು ಕಾಣುತ್ತದೆ.

**“ದಾಸಿಮುತ್ರನಾಗಲಿ ವೇಶ್ಯಾಪುತ್ರನಾಗಲಿ**
**ಶಿವದೀಕ್ಷೆಯಾದ ಬಳಿಕ ಸಾಕ್ಷಾತ್**
**ಶಿವನೆಂದು ವಂದಿಸಿ, ಪೂಜಿ, ಪಾದೋದಕ**
**ಪ್ರಸಾದವ ಕೊಂಬುದೆ ಯೋಗ್ಯ**
**ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ**
**ಪಂಚಮಹಾಪಾತಕ ನರಕ ಕಾಣಾ ಕೂಡಲಸಂಗಮದೇವಾ”**

ಅನಾದಿ ಕಾಲದಿಂದಲೂ ಆಚರಣೆಯಲ್ಲಿರುವ ಅನುಪಯುಕ್ತತೆಯ ಅಂದಾಚರಣೆಗಳು ಮತ್ತು ಕಲ್ಪನಾತೀತ ಪ್ರತೀತಿಗಳ ಬಗ್ಗೆ ಶರಣರಿಗೆ ಒಂದು ತರಹದ ರೋಷವಿದೆ. ಈ ರೋಷ ಆವೇಷದ'ಲ್ಲಿಯೂ ಮಾನವೀಯತೆಯ ಮಮಕಾರ ಇರುವುದನ್ನು ಗುರುತಿಸಬಹುದು.

**“ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ**
**ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ,**
**ಆಚಾರವೇ ಸ್ವರ್ಗ, ಅನಾಚಾರವೇ ನರಕ,**
**ಕೂಡಲಸಂಗಮದೇವಾ, ನೀವೇ ಪ್ರಮಾಣು**
**ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ ಕೂಡಲಸಂಗಮದೇವಾ”**

ಎನ್ನುವ ಬಸವಣ್ಣನವರ ಈ ವಚನದಲ್ಲಿ ಸತ್ಯದಲ್ಲಿ ಸ್ವರ್ಗವಿದೆ. ಮಿಥ್ಯೆಯಲ್ಲಿ ಮರ್ತ್ಯವಿದೆ. ಆಚಾರದಲ್ಲಿ ಸ್ವರ್ಗವಿದೆ: ಅನಾಚಾರದಲ್ಲಿ ನರಕವಿದೆ ಎಂಬ ಮಾನವೀಯತೆಯ ಸಂದೇಶ ನೆಲೆಗೊಂಡಿದೆ. ಕಲ್ಪನೆಯ ಸಾಮ್ರಾಜ್ಯದ ಸ್ವರ್ಗ ನರಕಗಳ ಬೆನ್ನು ಹತ್ತುವುದಕ್ಕಿಂತ ಸದಾಚಾರದಲ್ಲಿ ನಡೆದು, ಸತ್ಯದಲ್ಲಿ ನುಡಿಗಳನ್ನಿರಿಸಿದರೆ ಮರ್ತ್ಯವೇ ಮಹವಾಗುವುದೆಂದು ಶರಣರು ಸಾರಿದರು. ಇದೇ ಅಭಿಪ್ರಾಯವನ್ನು ಬಸವಣ್ಣನವರು ಮತ್ತೆ ಮತ್ತೆ ಒತ್ತಿ ಹೇಳಿರುವರು.

**“ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೆ?**
**ಈ ಲೋಕದೊಳಗೆ ಮತ್ತೆ ಆನಂತಲೋಕ**
**ಶಿವಲೋಕ ಶಿವಾಚಾರವಯ್ಯಾ**
**ಭಕ್ತನಿರ್ದ ಠಾವೇ ದೇವಲೋಕ**
**ಭಕ್ತನಂಗಳವೇ ವಾರಣಾಶಿ**
**ಕಾಯವೇ ಕೈಲಾಸ, ಇದು ಸತ್ಯ ಕೂಡಲಸಂಗಮದೇವಾ”.**

ವಚನಕಾರರು ಸ್ವರ್ಗ–ನರಕ ಪಾತಾಳ ಎಲ್ಲ ಲೋಕಗಳೂ ಇಲ್ಲಿಯೇ ಉಂಟು. ಶಿವಾಚಾರದಲ್ಲಿಯೇ ಶಿವಲೋಕವನ್ನು ಕಾಣುವರು, ಭಕ್ತರಂಗಳದಲ್ಲಿಯೇ ವಾರಣಾಶಿಯನ್ನು ನೋಡುವರು. ಭಕ್ತನಿರ್ದ ಠಾವೇ ದೇವಲೋಕವಾಗುವುದು. ಆಸ್ತಿಕಪಥವನ್ನು ಅನುಸರಿಸಿ ಈ ಲೋಕ ವ್ಯವಹಾರ ಕಡೆಗಣಿಸದೇ ನಡೆದ ಮಹಾನುಭಾವರಲ್ಲಿ ಶರಣರ ಸ್ಥಾನ ಗುರುತರವಾದುದು. ಈ ಲೋಕವನ್ನು ಬಿಟ್ಟು ಬೇರೆ ಲೋಕಕ್ಕೆ ಹೋಗಬೇಕೆಂಬ ಕಲ್ಪನೆ ಅವರಿಗಿಲ್ಲ. ಅವರ ದೃಷ್ಟಿಯಲ್ಲಿ ನಾವಿದ್ದ ಲೋಕವನ್ನು ಶಿವತ್ವದಲ್ಲಿ ಮಾರ್ಪಡಿಸುವುದೇ ಮುಖ್ಯವಾಗಿದ್ದಿತು. ಕಾಯವೇ ಅವರ ದೃಷ್ಟಿಯಲ್ಲಿ ಕೈಲಾಸ; ಬೇರೆ ಮತ್ತೆ ಕೈಲಾಸವೇ ಇನ್ನಿಲ್ಲ; ಸ್ವರ್ಗವಿಲ್ಲ ನರಕವಿಲ್ಲ; ಎಲ್ಲವೂ ನಮ್ಮ ನಡೆಯಲ್ಲಿ ನುಡಿಯಲ್ಲಿ, ದೃಷ್ಟಿಯಲ್ಲಿಯೇ ಇಲ್ಲಿಯೇ ಉದಿಸಿ ನಮ್ಮ ಬಾಳನ್ನು ಹಸನಾಗಿಸಬಲ್ಲವು. ಕಾಯವನ್ನೇ ಕೈಲಾಸವೆಂದು ಬಗೆದ ಶರಣರು, ಅದನ್ನೇ ಶಿವಾಲಯವನ್ನಾಗಿ ಮಾರ್ಪಡಿಸಿದರು. ಉಳ್ಳವರು ಶಿವಾಲಯವನ್ನು ಮಾಡುವರು, ನಾನೇನ ಮಾಡುವೆನಯ್ಯ, ಆನು ಬಡವನು, ಎನ್ನ ಕಾಲೇ ಕಂಬ, ದೇಹವೇ ದೇವಾಲಯ, ಶಿರವೇ ಹೊನ್ನ ಕಳಶ' ಎಂದು ಹೇಳಿ ದೇಹವನ್ನೇ ದೇಗುಲವನ್ನಾಗಿ

ಮಾರ್ಪಡಿಸಿ ಕೊಂಡರಲ್ಲದೆ, ಮಾನವನು ರಕ್ಕಸಿಯಾಗಬಲ್ಲ, ದೇವನೂ ಆಗಬಲ್ಲ ಎಂದು ಜಗಕ್ಕೆ ಸಾರಿದ ಬಸವಣ್ಣ ಅಂದು ಧಾರ್ಮಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿದ್ದ ಜನಸಮುದಾಯಗಳಿಗೆ ವಾಸ್ತವಿಕವಾದ, ವೈಚಾರಿಕ ತಳಹದಿಯ ಸರಳ ಆಚರಣೆಗಳ ರಹದಾರಿಗಳನ್ನು ತಮ್ಮ ವಚನಗಳ ಮೂಲಕ ತೋರಿಸಿದರು.

**"ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು.**
**ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು,**
**ತಲೆ ಜಡೆಗಟ್ಟಿದವರೆಲ್ಲ ಹೊಲೆಯರ ಸಂತಾನ"**
**ಆದ ಪ್ರಕಾರವಾದಡೇನು ಅರಿವೆ ಮುಖ್ಯವಯ್ಯ**
**ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ (ಶಿವಶರಣೆಯರ ವಚನ ಸಂ-೫,ವ-೪೪೬ ಪುಟ-೧೪೩)**

ಹೀಗೆ ಅಂದಾಚರಣೆಗಳನ್ನು ವಿಡಂಬಿಸುವ ಮೂಲಕ ಜೀವಪರ ಬೆಳವಣಿಗೆಗೆ ಅಡ್ಡಿಯಾಗುತ್ತಿದ್ದ ಸಾಂಪ್ರದಾಯಿಕ ಬಂಧನಗಳನ್ನು ಕಿತ್ತೊಗೆದು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಸಂಸ್ಕೃತಿಗೆ ನಾಂದಿಹಾಡಿದರು. ಹಬ್ಬ ಹುಣ್ಣಿಮೆಗಳಲ್ಲಿ ಹುತ್ತಕ್ಕೆ ಹಾಲನೆರೆಯುವ, ಮುಗ್ದಪ್ರಾಣಿಗಳನ್ನು ಕೊಂದು ತಿನ್ನುವ, ಜೀವಸಂವೇದಿ ಜಲಚರಗಳನ್ನು ಬಲಿ ನೀಡುವಂತಹ ಹಲವಾರು ಮೂಢಾಚರಣೆಗಳ ಬೇರುಗಳನ್ನೇ ಕತ್ತರಿಸುವ ಪ್ರಯತ್ನ ಮಾಡಿದರು. ವಚನಕಾರರ ಮಾನವೀಯತೆಯ ಪರ ಚಿಂತನೆ ಕೇವಲ ಮನುಷ್ಯರಿಗೆ ಮಾತ್ರವಾಗಿರದೆ, ಪ್ರಾಣಿಪಕ್ಷಿಗಳ ಹಿಂಸೆಯನ್ನು ಕೂಡ ತಮ್ಮ ವಚನಗಳಲ್ಲಿ ವಿಂಡಂಬಿಸಿ, ದಯಾಪರ ನಿಲುವಿನೆಡೆಗೆ ಸಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಬಲಿ ಕೊಡಲು ಎಳೆದುಕೊಂಡು ಹೋಗುತ್ತಿದ್ದ ಹೋತವನ್ನು ಕುರಿತು ವಚನಕಾರರು

**"ವೇದವನೋದಿದವರ ಮುಂದೆ ಅಳುಕಂಡೆಯಾ ಹೊತೆ**
**ಶಾಸ್ತ್ರವ್ ಹೇಳುವವರ ಮುಂದೆ ಅಳುಕಂಡೆಯಾ ಹೋತೆ**
**ನೀನತ್ತುದಕ್ಕೆ ತಕ್ಕುದನೀವ, ಕೂಡಲಸಂಗಮದೇವ"**

ಎನ್ನುವ ಈ ವಚನಗಳಲ್ಲಿ ಶರಣರ ಜೀವಪರ ಇರುವ ದಯಾಪರ ನಿಲುವು ಕಂಡುಬರುತ್ತದೆ.

**"ಹಬ್ಬಕ್ಕೆ ತಂದ ಹರಕೆಯ ಕುರಿ**
**ತೋರಣಕ್ಕೆ ತಂದ ತಳಿರ ಮೇಯಿತ್ತು**
**ಕೊಂದಹರೆಂಬುದನರಿಯದೆ,**
**ಬೆಂದ ಒಡಲ ಹೊರೆವುತ್ತಲಿದೆ**
**ಅಂದಂದೆ ಹುಟ್ಟಿತ್ತು ಅಂದಂದೆ ಹೊಂದಿತ್ತು**
**ಕೊಂದವರುಳಿದರೆ ಕೂಡಲ ಸಂಗಮದೇವ"..೪**

ಎಂದೆನ್ನುವ ಈ ವಚನದ'ಲ್ಲಿಯೂ ವಚನಕಾರರ ಅಂತಃಕರಣ ರೂಪದ ಮಾನವೀಯತೆಯ ವಿವೇಚನೆ ಇರುವುದನ್ನು ಕಾಣುತ್ತೇವೆ.

**"ಹತ್ತು ಮತ್ತರು ಭೂಮಿ ಬತ್ತದ ಹಯನು,**
**ನಂದಾದೀವಿಗೆಯ ನಡೆಸಿಹೆವೆಂಬವರ**
**ಮುಖವ ನೋಡಲಾಗದು.**
**ಅಂಡಜ, ಸ್ವೆದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ**
**ಭವಿತವ್ಯವ ಕೊಟ್ಟವರಾರೊ?**
**ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿದಂತೆ,**
**ಎನ್ನಿಂದಲೆ ಆಯಿತ್ತು ಎನ್ನಿಂದಲೆ ಹೋಯಿತ್ತು.**
**ಎಂಬವನ ಬಾಯಲ್ಲಿ ಮೆಟ್ಟಿ**
**ಹುಡಿಯ ಹೊಯ್ಯದೆ ಮಾಣ್ಬನೆ?**
**ಕೂಡಲ ಸಂಗಮದೇವ?"..೫**

ಎಂಬ ವಚನದಲ್ಲಿ ಸ್ಥಾಪಿತ ಮೌಲ್ಯಗಳ ಅನುಪಯುಕ್ತತೆಯ ಕರಿತು ವಚನಕಾರರಿಗೆ ಇವರು ಬೇಸರವನ್ನು ಕಾಣಬಹುದು, ಇಲ್ಲಿಯೂ ಸಹ ಮಾನವೀಯ ಪ್ರಜ್ಞೆ ವಚನಕಾರರ ಸಮಾಜಪರ ಚಿಂತನೆಗೆ ಪ್ರೇರಣೆಯಾಗಿರುವುದನ್ನು ಗುರುತಿಸಬಹುದು.

* ಮೇಲು-ಕೀಳು, ಉಚ್ಚ-ನೀಚ ಎಂಬ ಭಾವನೆಗೆ ಶರಣರು ಸದಾ ವಿರೋಧಿಗಳು. ಹೆಣ್ಣು ಗಂಡು, ಎಂಬ ತರತಮ ಭಾವವನ್ನು ಎಂದೂ ಒಪ್ಪರು, ಶರಣರು ಇವೆಲ್ಲವುಗಳನ್ನು ದಾಟಿ ಆಚೆಗೆ ನಿಂತರು. ಮೊಲೆ ಮುಡಿಗಳಿದ್ದರೆ ಹೆಣ್ಣೆಂಬರು, ಗಡ್ಡ ಮೀಸೆಗಳಿದ್ದರೆ ಗಂಡೆಂಬರು, ಒಳಗೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಎಂಬ ತತ್ವವನ್ನು ಪರಿಭಾವಿಸಿದವರು. ಅದನ್ನು ಜೀವನದಲ್ಲಿ ಅಳವಡಿಸಿಕೊಂಡವರಾಗಿದ್ದರು.

"ಸ್ತ್ರೀಯರ ಬಗ್ಗೆ ವಚನಕಾರರು ತೋರಿರುವ ಅಗಾಧ ಕಾಳಜಿಗೆ ಅವರಲ್ಲಿ ಸದಾ ಸ್ಪಂದಿಸುತ್ತಿದ್ದ ಮಾನವೀಯ ಅಂಶವೇ ಮೂಲಕಾರಣ, ನಾಲ್ಕು ಗೋಡೆಗಳ ಮಧ್ಯೆ ಬಾಳುವುದನ್ನೇ ಒಂದು ಆದರ್ಶವೆಂಬಂತೆ ಬಿಂಬಿಸಿ, ಅಡುಗೆಯ ಮನೆಯ ಅವಳ ದೇವಾಲಯವೆಂಬ ವಿಚಾರವನ್ನು ಅವಳ ತಲೆಯಲ್ಲಿ ತುಂಬಿ, ವಿದ್ಯಾಭ್ಯಾಸದ ಬಾಗಿಲುಗಳನ್ನೆಲ್ಲ ಭದ್ರಪಡಿಸಿ, ಸ್ತ್ರೀ ಸಮಾಜದ ಸ್ವಾತಂತ್ರ್ಯವನ್ನೇ ಆಗ ಹರಣ ಮಾಡಲಾಗಿತ್ತು. ಅಂಥವರನ್ನು ಕಂಡು ಮರ ಮರ ಮರುಗಿದ ಬಸವಾದಿ ಶರಣರು, ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ರಂಗಗಳಲ್ಲಿ ಸ್ತ್ರೀಯರಿಗೆ ಅವಕಾಶವನ್ನು ಒದಗಿಸಿ ಅವರ ಎಲ್ಲಂದದ ವಿಕಾಸಕ್ಕೆ ಅನುವು ಮಾಡಿಕೊಟ್ಟರು. ಅದರಿಂದಾಗಿ ಅನೇಕ ಜನ ಹೆಣ್ಣುಮಕ್ಕಳು ಪ್ರಬುದ್ಧ ವಚನಕಾರ್ತಿಯರಾಗುವ ಜೊತೆಗೆ ಆಧ್ಯಾತ್ಮದಲ್ಲಿಯೂ ಬಹು ಎತ್ತರಕ್ಕೇರಿ ಜೀವನ ಸಾರ್ಥಕಪಡಿಸಿಕೊಂಡರು. ತಮ್ಮ ಪತಿಗಳಿಗೂ ಬುದ್ದಿ ಹೇಳುವ, ತಮಗೆ ಸರಿಯೆನಿಸಿದ್ದನ್ನು ಧೈರ್ಯದಿಂದ ಆಡಿ ತೋರುವ ಮಟ್ಟಕ್ಕೂ ಅವರು ಬೆಳೆದರು. ಶರಣರ ಕೆಲವು ವಚನಗಳಲ್ಲಿ ಸ್ತ್ರೀಯರ ಬಗೆಗಿನ ಅವರ ಉದಾತ್ತ ದೃಷ್ಟಿ ಅಭಿವ್ಯಕ್ತಿ ಪಡೆದಿದೆ. "ಹೆಣ್ಣು ಹೆಣ್ಣಲ್ಲ ಹೆಣ್ಣು, ರಾಕ್ಷಸಿಯಲ್ಲ. ಹೆಣ್ಣು ಪ್ರತ್ಯಕ್ಷ ಮಲ್ಲಿಕಾರ್ಜುನ" ಎಂದು ಹೇಳಿದ್ದರೆ ಪರ ವಧುವನು ಮಹಾದೇವಿಯೆಂಬೆ'' ಎಂದು ಬಸವಣ್ಣ ಉದ್ಧರಿಸಿದ್ದಾನೆ. "ಗಂಡನುಳ್ಳಮ್ಮನ ಕಂಡು ಹಿಡಬೆರೆದಾತ ನರಕದಲ್ಲಿ ದಿಂಡುಗೆಡೆದಿಪ್ಪನಯ್ಯ ಎಂಬ ಜೇಡರ ದಾಸಿಮಯ್ಯನ ಮಾತನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು" ಎಂದು ಡಾ.ಬಿ.ವ್ಹಿ.ಮಲ್ಲಾಪುರ ರವರು ಲೇಖನವೊಂದರಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಇವರ ಅಭಿಪ್ರಾಯದಂತೆಯೇ

"ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ.
ಹೆಣ್ಣು ಪ್ರತ್ಯಕ್ಷ ಮಲ್ಲಿಕಾರ್ಜುನ"
"ಪರ ವಧುವನು ಮಹಾದೇವಿಯೆಂಬೆ''

ಎಂದು ಬಸವಣ್ಣ ಉದ್ಧರಿಸಿರುವುದು, ಸ್ತ್ರೀಯರಲ್ಲಿ ಶರಣರಿಗಿದ್ದ ಗೌರವ ಮತ್ತು ಮಾನವೀಯಪ್ರಜ್ಞೆಯನ್ನು ತೋರಿಸುತ್ತದೆ.

* ಮೇಲು-ಕೀಳುಗಳ ಭ್ರಮೆಯಲ್ಲಿರುವ ಎಲ್ಲಾ ವಿಧದಲ್ಲೂ ಪ್ರಬಲರಾದವರು ಸಮಾಜಿಕವಾಗಿ, ಆರ್ಥಿಕವಾಗಿ ದುರ್ಬಲರಾದವರನ್ನು ಹತ್ತಿಕ್ಕುವುದು ಭಾರತೀಯ ಸಮಾಜದಲ್ಲಿ ಕಂಡುಬರುತ್ತದೆ. ಉತ್ತಮ ಕುಲದಲ್ಲಿ ಹುಟ್ಟಿದೆವೆಂಬ ಭ್ರಮೆಯಿಂದ ಕಡಿಮೆಯೆನ್ನುವವರ ಶೋಷಣೆ ಮಾಡಿಸುವುದು ಒಂದೆಡೆಗೆ, ಆಳುವವರ ಆಳಿಸಿ ಕೊಳ್ಳುವವರನ್ನು ಶೋಷಣೆ ಮಾಡಿಸಿರುವುದು ಇನ್ನೊಂದೆಡೆ, ಬಲ್ಲಿದರು ಬಡವರನ್ನು ಶೋಷಣೆ ಮಾಡಿರುವುದು ಮತ್ತೊಂದೆಡೆ. ಜಾತಿಯ ನೆಪದಲ್ಲಿ ತಳಸಮುದಾಯಗಳನ್ನು ಸಮಾಜದಿಂದ ಕಡೆಗಿರಿಸಿ ಅವರನ್ನು ನಾನಾ ಬಗೆಯಾಗಿ ಹಿಂಸಿಸಿದ ಕಥನಕಗಳು, ಭಾರತದ ಸಮಾಜಿಕ ವ್ಯೆವಸ್ಥೆಯಲ್ಲಿ ಹೀನಾಯವಾಗಿದೆ. ಇಂತಹ ದುರವ್ಯೆವಸ್ಥೆಯನ್ನು ಸರಿ ಮಾಡಲು ಬಂದವರು ಬಸವಾದಿ ಶರಣರು. ಹೊಲೆತನದ ಅರ್ಥವೇನೆಂಬುದನ್ನು ಅವರು ಈ ರೀತಿಯಾಗಿ ತಿಳಿಸುವರು

**"ಕೋಲವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ**
**ಕುಲವೇನೋ ಅವಂದಿರ ಕುಲವೇನೋ**
**ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ**
**ಕೂಡಲಸಂಗನ ಶರಣರೇ ಕುಲಜರು"**

ಎಂದು ಹೇಳ ಹೊಲೆಯರ ಮನೆಯಲ್ಲಿ ಹುಟ್ಟಿದವರೆಲ್ಲರೂ ಹೊಲೆಯರೆಂಬ ಭಾವನೆ ಸಲ್ಲದು, ಸತ್ಕುಲದಲ್ಲಿ ಹುಟ್ಟಿ, ಕೊಲ್ಲುವ ಕಾರ್ಯದಲ್ಲಿ ನಿರತರಾದವರಿಗೇನನ್ನಬೇಕು? ಹೊಲೆತನ ಜನ್ಮದಿಂದ ಬರತಕ್ಕುದಲ್ಲ. ಅವರವರ ಆಚರಣೆಯಿಂದ ಬರಬಲ್ಲುದು, ಉಚ್ಚಕುಲದಲ್ಲಿ ಹುಟ್ಟಿದ್ದರೂ ಕೋಲುವವನು ಮಾದಿಗ; ಹೊಲಸು ತಿಂಬುವನು ಹೊಲೆಯ; ಅಂತಹರು ಕುಲಜರಲ್ಲ. ಸಕಲ ಜೀವಾತ್ಮರಿಗೆ ಲೇಸ ಬಯಸುವವರೆ ಕುಲಜರು. ಎನ್ನುವ ಶರಣರು ಶತಮಾನಗಳ ಕಹಿಸತ್ಯಗಳಗೆ ಮಾನವೀಯತೆಯ ಉತ್ತರವನ್ನು ನೀಡಿದರಲ್ಲದೆ, **'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ'** ದಿವ್ಯ ಸಂದೇಶವನ್ನು ಮಾನವ ಕುಲಕ್ಕೆ ನೀಡಿದರು.

ಕಾಯಕಧರ್ಮ ಕುರಿತು ಶರಣರು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಗಮನಿಸಿದಾಗ ಅಲ್ಲಿಯೂ ಅವರ ಮಾನವೀಯತೆ ಧ್ವನಿಸುತ್ತಿರುವುದನ್ನು ಗುರುತಿಸಬಹುದಾಗಿದೆ ಸಮಾಜದಲ್ಲಿ ಗೌರವಯುತ ಜೀವನ ಸಾಗಿಸಲು ಅನಿವಾರ್ಯವಾದ ದುಡಿಮೆ ಮೂಲ ವೃತ್ತಿಗಳಲ್ಲಿ ಕೂಡ ಮೇಲು–ಕೀಳು ಗಳನ್ನು ಕಲ್ಪಿಸಿ, ಅವುಗಳನ್ನು ಅನುಸರಿಸುತ್ತಿರುವವರಲ್ಲಿಯೂ ತಾರತಮ್ಯ ತೋರುತ್ತಿದ್ದ ಅವೈಚಾರಿಕ ಅವೈಜ್ಞಾನಿಕ ರೂಢಿ ಮೂಲ ಜಾತಿ ಪದ್ಧತಿಯನ್ನು ತೀವ್ರವಾಗಿ ವಿರೋಧಿಸುವ ವಚನಕಾರರು, ಅದರಿಂದಾಗಿ ಸಾಮಾಜಿಕ ಸ್ಥಾನಮಾನಗಳಗೆ ಎರವಾದವರ ಪರವಾಗಿ ಧ್ವನಿಯೆತ್ತಿರುವುದು ಅಂಥವರ ಬಗೆಗಿದ್ದ ಶರಣರ ಮಾನವೀಯ ಗುಣದ ದ್ಯೋತಕವಾಗಿದೆ. ಅದಕ್ಕಾಗಿ ಅವರು ದುಡಿಮೆ ಮೂಲಸತ್ಯ ಶುದ್ಧ ವೃತ್ತಿಗಳನ್ನು ಕಾಯಕ ಎಂದು. ಕರೆದು ಅಂತಹ ಕಾಯಕ ಜೀವಿಗಳಗೆ ಗೌರವಾದರಗಳನ್ನು ತೋರಿಸಿ, ಸಾಮಾಜಿಕವಾಗಿ ಅವರನ್ನು ಮೇಲೆತ್ತಲು ಮನಃಪೂರ್ವಕ ಶ್ರಮಿಸಿದ್ದಾರೆ.

**"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ**
**ಚಿತ್ತಶುದ್ಧದಲ್ಲಿ ಕಾಯಕವ ಮಡುವಲ್ಲಿ**
**ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷೀ ತಾನಾಗಿಪ್ಪಳು**
**ಮಾರಯ್ಯಪ್ರಿಯ ಅಮಲೇಶ್ವರಲಿಂಗದ ಸೇವೆಯುಳ್ಳನ್ನಕ್ಕರ"**

ಕಾಯಕವನ್ನು ಮಾಡುವಲ್ಲಿ ಚಿತ್ತಶುದ್ಧವಾಗಿರಬೇಕು ಎಂಬುದನ್ನು ಈ ವಚನದ ಮೂಲಕ ಸ್ಪಷ್ಟಪಡಿಸಿದ್ದಾಳೆ ಶರಣೆ ಲಕ್ಕಮ್ಮ. ಚಿತ್ತಶುದ್ಧವಿಲ್ಲದೆ ಮಾಡುವ ಯಾವ ಕಾಯಕವೂ, ಗಳಸಿದ ಅರ್ಥವೂ ವ್ಯರ್ಥ ಎಂಬ ವಿಚಾರ ಇಲ್ಲಿ ವ್ಯಕ್ತವಾಗಿದೆ.

**"ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು**
**ಲಿಂಗಪೂಜೆಯಾದಡೂ ಮರೆಯಬೇಕು**
**ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು**
**ಕಾಯಕವೇ ಕೈಲಾಸವಾದ ಕಾರಣ**
**ಅಮಲೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು"**

ಇಂತಹ ವಚನಗಳಲ್ಲಿ ಶ್ರಮಜೀವಿಗಳ ಬಗೆಗಿನ ಶರಣರ ಮಾನವೀಯ ದೃಷ್ಟಿ ಪರಿಸ್ಫುಟವಾಗುತ್ತದೆ.

ಹೀಗೆ ರಚನೆಗೊಳ್ಳುತ್ತ ಬಂದ ಸಾಹಿತ್ಯ ಮೊಟ್ಟಮೊದಲು ಜನಸಮ್ಮುಖವಾದದು ಶರಣರ ಕಾಲದಲ್ಲಿ ಅದು ಸರಳ ಮತ್ತು ಸಹಜವಾಗಿ ಒಡಮೂಡಿಬಂದಿರುವುದು ಗಮನಿಸಬೇಕಾದ ಅಂಶ. ಅದಕ್ಕೆ ಮುಖ್ಯಕಾರಣ ಅವರ ಆ ಸಾಹಿತ್ಯ ಮಾನವೀಯತೆಯಿಂದ ಸ್ಫೂರ್ತಿಗೊಂಡಿ ರುವುದಾಗಿದೆ. ಹೀಗೆ ಶರಣರ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಹಿತ್ಯಕ ಮತ್ತು ಆನುಭಾವಿಕ ಕಾರ್ಯಗಳೆಲ್ಲವೂ ಸ್ಫೂರ್ತಿಗೊಂಡಿರುವುದು ಮಾನವೀಯತೆಯಿಂದಲೇ ಎಂಬುದನ್ನು ನವೆಲ್ಲರೂ ಗಮನಿಸಬೇಕಾಗಿದೆ.

## *ಅಡಿಟಪ್ಪಣಿಗಳು:*

**೧)೧.೨.೩.೪.೫.ಸಂಖ್ಯೆಯ ಈ ವಚನಗಳನ್ನು 'ಭಾಷಾ ಸಂಗಮ' ಅಭಿನಂದನ ಗ್ರಂಥ. ಸಂ.–ಡಾ.ಬಸವರಾಜ ಪೋಲಿಸ ಪಾಟೀಲ. ಡಾ.ಬಿ.ವ್ಹಿ.ಮಲ್ಲಾಪುರ 'ವಚನ ಸಾಹಿತ್ಯ–ಮಾನವೀಯತೆ' ಎಂಬ ಲೇಖನದಿಂದ ಆಯ್ದುಕೊಳ್ಳಲಾಗಿದೆ.**
**೨)ಉಳದ ವಚನಗಳನ್ನು 'ಸಾವಧಾನ' ಮಾಸಿಕ ಕನ್ನಡ ಪತ್ರಿಕೆ ಮುರುಘಾಮಠ.ಧಾರವಾಡ.ಸಂಪುಟ–೭೨.ಸಂಚಿಕೆ–೨.೪.೫.ಇಂದ ಆಯ್ದುಕೊಳ್ಳಲಾಗಿದೆ.**

## ಆಕರ ಗ್ರಂಥಗಳು:

**೧)'ಸಾವಧಾನ' ಮಾಸಿಕ ಕನ್ನಡ ಪತ್ರಿಕೆ ಮುರುಘಾಮಠ.ಧಾರವಾಡ.ಸಂಪುಟ–೭೨.ಸಂಚಿಕೆ–.೪.೫.**
**೨)ವಚನ ಕಮ್ಮಟ ಸಂ.ಕೆ.ಮರುಳಸಿದ್ದಪ್ಪ–ಕಿ.ರಂ.ನಾಗರಾಜ. ಸ್ವಪ್ನ ಬುಕ್ ಹೌಸ್.೨೦೧೭.ಬೆಂಗಳೂರು.**
**೩)'ಭಾಷಾ ಸಂಗಮ' ಅಭಿನಂದನ ಗ್ರಂಥ. ಸಂ.–ಡಾ.ಬಸವರಾಜ ಪೋಲಿಸ ಪಾಟೀಲ. ೨೦೦೩. ಗುಲ್ಬರ್ಗಾ ವಿಶ್ವವಿದ್ಯಾಲಯ.ಗುಲ್ಬರ್ಗಾ.**
**೪)'ಸಾವಧಾನ' ಮಾಸಿಕ ಕನ್ನಡ ಪತ್ರಿಕೆ ಮುರುಘಾಮಠ.ಧಾರವಾಡ.ಸಂಪುಟ–೭೨.ಸಂಚಿಕೆ–೨**